ಶಾಲಾ ಶಿಕ್ಷಣ ಇಲಾಖೆ

# ನಲಿಕಲಿ

## ಅಭ್ಯಾಸ ಸಹಿತ ಪಠ್ಯಪುಸ್ತಕ

# ಆರೋಗ್ಯ ಮತ್ತು ಪರಿಸರ

## ಭಾಗ –2

# 1

ಒಂದನೇ ತರಗತಿ

NOT TO BE REPUBLISHED @KTBS

ಸಮಗ್ರ ಶಿಕ್ಷಣ, ಕರ್ನಾಟಕ
ನೃಪತುಂಗ ರಸ್ತೆ
ಬೆಂಗಳೂರು – 560 001

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

# ನನ್ನ ಕಲಿಕೆಯ ವಿಷಯಗಳು


| ಮೈಲುಗಲ್ಲು | ಶೀರ್ಷಿಕೆ | ಚಟುವಟಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 5 | ಆಟಗಳ ಗಮ್ಮತ್ತು | 5.1–5.7 | 1-7 |
| 6 | ಸುರಕ್ಷತೆಯ ವಿಧಾನ | 6.1–6.8 | 8-15 |
| 7 | ನಾನು ಮತ್ತು ನನ್ನ ಕೆಲಸ | 7.1–7.7 | 16-22 |
| 8 | ಸುತ್ತಲ ಅಪಾಯ ಮತ್ತು ಸುತ್ತಲ ವೃತ್ತಿಗಳು | 8.1–8.8 | 23-30 |
| 9 | ಮುಖ ಭಾವಗಳು | 9.1–9.4 | 31-34 |
| 10 | ಪ್ರಾಣಿ–ಪಕ್ಷಿ–ಸಸ್ಯಗಳು | 10.1–10.8 | 35-45 |
| * | ಮೌಲ್ಯಾಂಕನ – ಸೂಚಿತ ಕಲಿಕಾ ಫಲಗಳು | – | 46 |


@KTBS NOT TO BE REPUBLISHED

# 5

## 5.1 ನನ್ನ ಮಾತು

2

**ಸೂಚನೆ :** ಈ ಚಿತ್ರಗಳನ್ನು ಗಮನಿಸಿ. ಇವುಗಳ ಬಗ್ಗೆ ಮಾತನಾಡೋಣ.









© KTBS NOT TO BE REPUBLISHED

**ಉತ್ತರಿಸು:** 1. ಈ ಚಿತ್ರಗಳಲ್ಲಿ ಯಾರೆಲ್ಲಾ ಚೆಂಡಿನ ಆಟ ಆಡುತ್ತಿದ್ದಾರೆ?

2. ಈ ಚಿತ್ರಗಳಲ್ಲಿ ಕಾಣುತ್ತಿರುವ ಇತರೆ ಆಟಗಳು ಯಾವುವು?

3. ನಿನ್ನ ಇಷ್ಟದ ಆಟಗಳು ಯಾವುವು? ಹೆಸರಿಸು.

* ನಿಮ್ಮ ತರಗತಿಯಲ್ಲಿ ಎಲ್ಲರೂ ಸೇರಿ ವಿವಿಧ ರೀತಿಯ ಆಟ ಆಡುವುದನ್ನು ಕಲಿಯಿರಿ.

5

# 5.2 ಚೆಂಡಿನಾಟ

**ಸೂಚನೆ:** ಚಿತ್ರವನ್ನು ಗಮನಿಸು. ಚೆಂಡನ್ನು ಬಳಸಿ ಆಡುವ ಆಟಗಳ ಬಗ್ಗೆ ಮಾತನಾಡೋಣ.










@KTBS
NOT TO BE REPUBLISHED

**ಉತ್ತರಿಸು:** 1. ಚಿತ್ರದಲ್ಲಿನ ಮಕ್ಕಳು ಯಾವ ಯಾವ ಆಟವನ್ನು ಆಡುತ್ತಿದ್ದಾರೆ?

2. ನೀನು ಎಂದಾದರೂ ಈ ರೀತಿಯ ಆಟವನ್ನು ಆಡಿರುವೆಯಾ?

3. ಈ ಆಟವನ್ನು ಆಡಲು ಏನೇನು ಸಾಮಗ್ರಿಗಳು ಬೇಕು?

5

## 5.3 ಆಟ ಆಡು, ಮೋಜು ಮಾಡು

2

**ಸೂಚನೆ:** ಚೆಂಡನ್ನು ಬಳಸಿ ಬೇರೆ–ಬೇರೆ ರೀತಿಯ ಆಟಗಳನ್ನು ಆಡೋಣ.










@KTBS NOT TO BE REPUBLISHED

**ಹೀಗೆ ಮಾಡು :**
1. ನೀನು ಆಡಿರುವ ಚೆಂಡಿನ ಆಟಗಳ ಬಗ್ಗೆ ಮಾತನಾಡು.
2. ಗೆಳೆಯರೆಲ್ಲಾ ಸೇರಿ ಚೆಂಡಿನ ವಿವಿಧ ರೀತಿಯ ಆಟಗಳನ್ನು ಆಡಿರಿ.
3. ಹಲವು ಬಗೆಯ ಚೆಂಡುಗಳಿವೆ. ಅವುಗಳನ್ನು ಶಿಕ್ಷಕರ ಸಹಾಯದಿಂದ ಆಟ ಆಡಲು ಪರಿಚಯ ಮಾಡಿಕೊ.

5

## 5.4 ಇವು ಏನು ?

3

**ಸೂಚನೆ:** ಈ ಚಿತ್ರದಲ್ಲಿರುವ ಆಟದ ಸಾಮಗ್ರಿಗಳನ್ನು ಹೆಸರಿಸೋಣ.










NOT TO BE REPUBLISHED @KTBS

**ಹೀಗೆ ಮಾಡು:**
1. ಶಿಕ್ಷಕರ ಸಹಾಯದಿಂದ ಆಟಗಳ ಸಾಮಗ್ರಿಗಳ ಬಗ್ಗೆ ತಿಳಿಯೋಣ.
2. ಗೆಳೆಯರೆಲ್ಲಾ ಸೇರಿ ನಿಯಮ ಪಾಲಿಸಿ ಈ ಆಟಗಳನ್ನು ಆಡೋಣ.
3. ಶಿಕ್ಷಕರ ನೆರವಿನೊಂದಿಗೆ ಬಿಡುವಿನ ವೇಳೆಯಲ್ಲಿ ಈ ಆಟಗಳ ಬಗ್ಗೆ ಹೆಚ್ಚು ಅಭ್ಯಾಸ ಮಾಡೋಣ.

5

## 5.5 ನಿಯಮ ಪಾಲನೆ

2

**ಸೂಚನೆ:** ನಿಮಯ ಅನುಸರಿಸಿ ಈ ಆಟವನ್ನು ಆಡೋಣ.




**ಹೀಗೆ ಮಾಡು:**
1. ಈ ಚಿತ್ರದಲ್ಲಿರುವ ಸಂಖ್ಯೆಗಳನ್ನು ಓದೋಣ ಹಾಗೂ ಎಣಿಸಿ ಕೊಂಡು ಬರೆಯೋಣ.
2. ನೀನು ಮತ್ತು ನಿನ್ನ ಸ್ನೇಹಿತರು ಸೇರಿ ಹಾವು – ಏಣಿ ಆಟವನ್ನು ಆಡಿರಿ.
3. ನಿಯಮವನ್ನು ಪಾಲಿಸಿ ಈ ಆಟವನ್ನು ಹೇಗೆ ಆಡುವುದೆಂದು ತರಗತಿಯಲ್ಲಿ ಎಲ್ಲರಿಗೂ ವಿವರಿಸಿ.

5

## 5.6 ಮೋಜಿನ ಗಣಿತ

3

**ಸೂಚನೆ:** ಕೊಟ್ಟಿರುವ ಹೇಳಿಕೆಗಳನ್ನು ಶಿಕ್ಷಕರು/ಹಿರಿಯರು ಗಟ್ಟಿಯಾಗಿ ಓದಿ ಹೇಳಲಿ, ಅದಕ್ಕೆ ನಿನ್ನ ಉತ್ತರದ ಸಂಖ್ಯೆಯನ್ನು ಖಾಲಿ ಜಾಗದಲ್ಲಿ ಬರೆ.

| ಕ್ರ.ಸಂ. | ಹೇಳಿಕೆಗಳು | ಸಂಖ್ಯೆ |
|---|---|---|
| 1. | ಒಂದು ಹಸುವಿಗೆ ಇರುವ ಕಣ್ಣುಗಳು | |
| 2. | ಒಂದು ಚಿಟ್ಟೆಗಿರುವ ಕಾಲುಗಳು | |
| 3. | ಒಂದು ನಾಯಿಗಿರುವ ಬಾಲ | |
| 4. | ಪಾರಿವಾಳದ ಕಾಲುಗಳಲ್ಲಿರುವ ಬೆರಳುಗಳು | |
| 5. | ದಾಸವಾಳ ಹೂವಿನಲ್ಲಿರುವ ದಳಗಳು | |
| 6. | ನಿನ್ನ ಮನೆಯಲ್ಲಿರುವ ಕಿಟಕಿಗಳು | |
| 7. | ನಿನ್ನ ಕೈ ಹಾಗೂ ಕಾಲುಗಳಲ್ಲಿರುವ ಬೆರಳುಗಳು | |
| 8 | ನಿನ್ನ ಶಾಲೆಯಲ್ಲಿರುವ ಕೊಠಡಿಗಳು | |
| 9. | ನಿನ್ನ ಮನೆಯಲ್ಲಿರುವ ಒಟ್ಟು ಸದಸ್ಯರು | |

NOT TO BE REPUBLISHED @KTBS

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

## 5.7 ಹಿರಿಯರ ಆಟಗಳು



**ಸೂಚನೆ:** ಹಿಂದೆ ನಮ್ಮ ಹಿರಿಯರು ಆಡುತ್ತಿದ್ದ ಆಟಗಳನ್ನು ನಾವೂ ಅಭ್ಯಾಸ ಮಾಡೋಣ.








**ಹೀಗೆ ಮಾಡು:**

1. ಶಿಕ್ಷಕರ/ಹಿರಿಯರ ಈ ಆಟಗಳನ್ನು ಆಡುವುದು ಹೇಗೆಂದು ತಿಳಿದುಕೊಳ್ಳಿ.
2. ಈ ಆಟಕ್ಕೆ ಬೇಕಿರುವ ಸಾಮಗ್ರಿಗಳನ್ನು ಗೆಳೆಯರೆಲ್ಲಾ ಸೇರಿ ಸಂಗ್ರಹಿಸಿ.
3. ಬಿಡುವಿನ ವೇಳೆಯಲ್ಲಿ ಹಿರಿಯರೊಂದಿಗೆ ಈ ಆಟಗಳನ್ನು ಆಡಿರಿ.

6

# 6.1 ಚಾಕು ಬಳಸುವುದು ಹೇಗೆ?

2

**ಸೂಚನೆ:** ನಿತ್ಯ ಜೀವನದಲ್ಲಿ ಚಾಕು ಬಳಸುವುದು ಹೇಗೆಂದು ಅಭ್ಯಾಸ ಮಾಡೋಣ.





NOT TO BE REPUBLISHED

**ಹೀಗೆ ಮಾಡು :** ಚಾಕು ಬಳಕೆಯ ಅಪಾಯಕಾರಿ ಸನ್ನಿವೇಶಗಳ ಬಗ್ಗೆ ಹಿರಿಯ–ರಿಂದ ತಿಳಿದುಕೊಳ್ಳೋಣ. ಪ್ಲಾಸ್ಟಿಕ್ ಚಾಕು ಬಳಸಿ ಹಣ್ಣುಗಳನ್ನು ಹಾಗೂ ತರಕಾರಿಗಳನ್ನು ಕತ್ತರಿಸುವುದು ಹೇಗೆಂದು ಅಭ್ಯಾಸ ಮಾಡೋಣ.

6

## 6.2 ಸರಿ–ತಪ್ಪು ತಿಳಿಸು

3

**ಸೂಚನೆ:** ಈ ಕೆಳಗಿನ ಚಿತ್ರಗಳಲ್ಲಿ ಚಾಕುವಿನ ಸರಿಯಾದ ಬಳಕೆ ಮತ್ತು ತಪ್ಪಾದ ಬಳಕೆಯನ್ನು ಗುರುತಿಸಿ ಹೇಳೋಣ.



@KTBS NOT TO BE PUBLISHED

**ಯೋಚಿಸು:** 1. ಹಿರಿಯರು/ಶಿಕ್ಷಕರ ಸಹಾಯದೊಂದಿಗೆ ಚಾಕು ಬಳಕೆಯ ಸರಿಯಾದ ವಿಧಾನವನ್ನು ಕಲಿಯೋಣ.

2. ಚಾಕು ಬಳಸಿ ಕ್ಯಾರೆಟ್, ಮೂಲಂಗಿ, ಈರೆಕಾಯಿ, ಸೌತೆಕಾಯಿ, ನುಗ್ಗೇಕಾಯಿ, ಬಾಳೆಹಣ್ಣು, ಪಪ್ಪಾಯಿ ಕತ್ತರಿಸುವುದನ್ನು ಶಿಕ್ಷಕರ ಸಹಾಯದೊಂದಿಗೆ ಅಭ್ಯಾಸ ಮಾಡೋಣ.

3. ನಿತ್ಯ ಜೀವನದಲ್ಲಿ ಚಾಕುವನ್ನು ಎಲ್ಲೆಲ್ಲಿ ಬಳಕೆ ಮಾಡುತ್ತೇವೆ? ತಿಳಿಸು.

6

## 6.3 ನನ್ನ ಮಾತು

**ಸೂಚನೆ:** ಇಲ್ಲಿನ ಚಿತ್ರಗಳನ್ನು ಗಮನಿಸಿ, ಇವುಗಳ ಬಗ್ಗೆ ಮಾತನಾಡೋಣ.



@KTBS NOT TO BE REPUBLISHED





**ಹೀಗೆ ಮಾಡು :** ನೇಲ್ ಕಟರ್ ಅನ್ನು ಹೇಗೆ ಬಳಸಬೇಕು ಎಂಬುದನ್ನು ಶಿಕ್ಷಕರ ಸಹಾಯದಿಂದ ತಿಳಿಯೋಣ. ಶಿಕ್ಷಕರ ಮಾರ್ಗದರ್ಶನದಲ್ಲಿ ನೇಲ್ ಕಟರ್ ಬಳಸಿ ಉಗುರು ಕತ್ತರಿಸುವುದನ್ನು ಅಭ್ಯಾಸ ಮಾಡೋಣ.

## 6.4 ನಾನೇ ಜೋಡಿಸುವೆ



**ಸೂಚನೆ:** ಪೂರ್ಣ ಚಿತ್ರವನ್ನು ಗಮನಿಸು. ಯಾವುದು ಮೊದಲು ಯಾವುದು ನಂತರ ಎಂದು ಯೋಚಿಸಿ ಕೆಳಗಿನ ಫಜಲ್‌ಗಳಿಗೆ ಕ್ರಮಸಂಖ್ಯೆ ನೀಡು.





@KTBS NOT TO BE REPUBLISHED

6

# 6.5 ನನಗೆಷ್ಟು ತಿಳಿದಿದೆ ?

3

**ಸೂಚನೆ:** ಹಿರಿಯರ ಸಹಾಯದಿಂದ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳೋಣ.
ಸರಿ ತಪ್ಪು ಯಾವುದೆಂದು ಗುರುತಿಸೋಣ.

| ಕ್ರ.ಸಂ. | ಹೇಳಿಕೆಗಳು | ☑ | ☒ |
|---|---|---|---|
| 1. | ಚಾಕು ಬಳಸುವ ಮೊದಲು ಪ್ಲಾಸ್ಟಿಕ್ ಚಾಕು ಬಳಸುವುದನ್ನು ಕಲಿಯಬೇಕು. | | |
| 2. | ಹರಿತವಾದ ಚಾಕುವನ್ನು ಬಹಳ ಎಚ್ಚರಕೆಯಿಂದ ಬಳಸಬೇಕು. | | |
| 3. | ಹಣ್ಣು, ತರಕಾರಿಗಳನ್ನು ಕತ್ತರಿಸಲು ಚಾಕು ಬಳಸಬೇಕು. | | |
| 4. | ಚಾಕುವಿನಿಂದ ಆಟ ಆಡುವುದು ತುಂಬಾ ಒಳ್ಳೆಯದು. | | |
| 5. | ಕೇಕ್ ಕತ್ತರಿಸಲು ಕತ್ತರಿಯನ್ನು ಬಳಸುತ್ತಾರೆ. | | |
| 6. | ಉಗುರುಗಳನ್ನು ಹಲ್ಲಿನಿಂದ ಕಚ್ಚಿ ತೆಗೆಯುವುದು ಒಳ್ಳೆಯದು. | | |
| 7. | ಆಗಾಗ್ಗೆ ಉಗುರುಗಳನ್ನು ಕತ್ತರಿಸುತ್ತಿರಬೇಕು. | | |
| 8. | ಉಗುರುಗಳನ್ನು ಕತ್ತರಿಸಲು ನೇಲ್ ಕಟರ್ ಬಳಸಬೇಕು. | | |

@KTBS
NOT TO BE REPUBLISHED

- ✦ ನನಗೆ ಅರ್ಥವಾಗಿದೆ ☐
- ✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

6

# 6.6 ಟ್ರಿಣ್..... ಟ್ರಿಣ್.... ಬೈಸಿಕಲ್

2

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಮಾತನಾಡೋಣ. ಸೈಕಲ್ ಓಡಿಸುವಾಗ ಅನುಸರಿಸಬೇಕಾದ ಎಚ್ಚರಿಕೆಗಳ ಬಗ್ಗೆ ತಿಳಿಯೋಣ.







@KTBS NOT TO BE REPUBLISHED

**ಹೀಗೆ ಮಾಡು :**

ಹಿರಿಯರ ಸಹಾಯದಿಂದ ಸೈಕಲ್ ಓಡಿಸುವುದನ್ನು ಅಭ್ಯಾಸ ಮಾಡೋಣ.
ಸರಿಯಾಗಿ ಕಲಿಯದೇ, ರಸ್ತೆಯಲ್ಲಿ ಸೈಕಲ್ ಓಡಿಸಬಾರದೆಂದು ತಿಳಿಯೋಣ.
ಸೈಕಲ್ ಓಡಿಸುವಾಗ ಏನೇನು ಗಮನಿಸಬೇಕು? ಯೋಚಿಸಿ ಹೇಳೋಣ.
ಒಂದು ಸೈಕಲ್‌ನಲ್ಲಿರುವ ಭಾಗಗಳ ಬಗ್ಗೆ ಸ್ನೇಹಿತರಿಗೆ ಪರಿಚಯ ಮಾಡಿಕೊಡೋಣ.

6

# 6.7 ಸರಿ-ತಪ್ಪು ತಿಳಿಸು

2

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಇವುಗಳಲ್ಲಿ ಸರಿ ಮತ್ತು ತಪ್ಪು ಯಾವುದೆಂದು ಹೇಳೋಣ.



©KTBS NOT TO BE REPUBLISHED

**ಹೀಗೆ ಮಾಡು :** ರಸ್ತೆಯಲ್ಲಿ ನಡೆಯುವಾಗ ಅನುಸರಿಸಬೇಕಾದ ರಸ್ತೆ ಸುರಕ್ಷತೆಯ ನಿಯಮಗಳ ಬಗ್ಗೆ ಶಿಕ್ಷಕರಿಂದ ತಿಳಿದುಕೊಳ್ಳೋಣ. ನಗರ ಪ್ರದೇಶದಲ್ಲಿ ರಸ್ತೆ ದಾಟಲು ಏನೆಲ್ಲಾ ಸೌಲಭ್ಯಗಳು ಮಾಡಿರುತ್ತಾರೆ ಎಂಬುದನ್ನು ಹಿರಿಯರ ಸಹಾಯದಿಂದ ಕೇಳಿ ತಿಳಿಯೋಣ.

* ಫ್ಲೈಓವರ್, ಸುರಂಗ ಮಾರ್ಗ ಕಡಿದಾದ ಬೆಟ್ಟಗಳ ರಸ್ತೆ, ತೂಗು ಸೇತುವೆ ಬಗ್ಗೆ ತಿಳಿದು ಮಾತನಾಡೋಣ.

6

# 6.8 ರಸ್ತೆ ಸುರಕ್ಷತೆ

3

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ರಸ್ತೆ ಸುರಕ್ಷತೆಯ ನಿಯಮಗಳನ್ನು ಅರ್ಥಮಾಡಿಕೊಳ್ಳೋಣ.









NOT TO BE REPUBLISHED @KTBS

**ಉತ್ತರಿಸು :**

1. ಕೆಂಪು ದೀಪ ಕಾಣಿಸಿದರೆ ನಾನು ಏನು ಮಾಡಬೇಕು?
2. ಹಳದಿ ದೀಪ ಕಾಣಿಸಿದರೆ ನಾನು ಏನು ಮಾಡಬೇಕು?
3. ಹಸಿರು ದೀಪ ಕಾಣಿಸಿದರೆ ನಾನು ಏನು ಮಾಡಬೇಕು?

**ಹೀಗೆ ಮಾಡು :**

ನಗರ ಪ್ರದೇಶಗಳಲ್ಲಿ ರಸ್ತೆ ದಾಟಲು ಯಾವ ಯಾವ ಮಾರ್ಗಗಳನ್ನು ಅನುಸರಿಸುತ್ತಾರೆ ಎಂಬುದರ ಬಗ್ಗೆ ಹಿರಿಯರಿಂದ ಕೇಳಿ ತಿಳಿಯೋಣ. ನಗರ ಪ್ರದೇಶದ ಮಾರ್ಗಗಳ ಬಗ್ಗೆ ತಿಳಿದಿದ್ದರೆ ನಾವೇ ಮಾತನಾಡೋಣ.

# 7

## 7.1 ರಜಾ–ಮಜಾ

**ಸೂಚನೆ:** ಚಿತ್ರಗಳನ್ನು ಗಮನಿಸಿ, ಇಲ್ಲಿನ ಸನ್ನಿವೇಶಗಳನ್ನು ವಿವರಿಸೋಣ.









© KTBS NOT TO BE REPUBLISHED

**ಉತ್ತರಿಸು:**
1. ಈ ಚಿತ್ರಗಳನ್ನು ನೋಡಿದಾಗ ನಿನಗೆ ಏನನ್ನಿಸುತ್ತದೆ?
2. ಶಾಲೆಗೆ ರಜೆ ನೀಡಿದಾಗ ಯಾವ ಯಾವ ಆಟಗಳನ್ನು ಆಡುವೆ?
3. ರಜೆ ಸಮಯದಲ್ಲಿ ನಿನ್ನೊಂದಿಗೆ ಆಟವಾಡುವ ಸ್ನೇಹಿತರ ಹೆಸರುಗಳನ್ನು ಹೇಳುವೆಯಾ?
4. ರಜೆಯ ಸಮಯದಲ್ಲಿ ನಿನಗೆ ಏನು ಮಾಡಲು ಹೆಚ್ಚು ಇಷ್ಟವಾಗುತ್ತದೆ?

# 7.2 ನನ್ನ ಆಟ – ನನ್ನ ಖುಷಿ



**ಸೂಚನೆ:** ಈ ಚಿತ್ರಗಳಲ್ಲಿರುವ ಆಟಗಳನ್ನು ಗೆಳೆಯರೆಲ್ಲಾ ಸೇರಿ ಆಡೋಣ.





@KTBS NOT TO BE REPUBLISHED



**ಉತ್ತರಿಸು:**

1. ಒಬ್ಬರೇ ಆಡುವ ಆಟಗಳು ಯಾವುವು? ಯೋಚಿಸಿ ಉತ್ತರಿಸು.
2. ಗೆಳೆಯರೊಂದಿಗೆ ಸೇರಿ ಆಡುವ ಆಟಗಳು ಯಾವುವು? ಯೋಚಿಸಿ ಉತ್ತರಿಸು.
3. ನಿಮ್ಮ ಅಕ್ಕ / ಅಣ್ಣ / ಸ್ನೇಹಿತರು ಶಾಲೆಯಲ್ಲಿ ಯಾವ ಯಾವ ಆಟಗಳನ್ನು ಆಡುತ್ತಾರೆ? ತಿಳಿಸು.
4. ನೀನು ಶಾಲೆಯಲ್ಲಿ ಇಷ್ಟಪಟ್ಟು ಆಡುವ ಆಟಗಳು ಯಾವುವು? ಹೆಸರಿಸು.

## 7.3 ನಾನು ಕೆಲಸ ಮಾಡುವೆ



**ಸೂಚನೆ:** ಚಿತ್ರಗಳನ್ನು ಗಮನಿಸಿ ಇಲ್ಲಿನ ಸನ್ನಿವೇಶಗಳನ್ನು ವಿವರಿಸೋಣ.









@KTBS NOT TO BE REPUBLISHED

**ಉತ್ತರಿಸು:**
1. ಈ ಚಿತ್ರದಲ್ಲಿ ಮಕ್ಕಳು ಏನೇನು ಮಾಡುತ್ತಿದ್ದಾರೆ?
2. ಭಾರವಾದ ವಸ್ತುಗಳನ್ನು ನೀನು ಹೇಗೆ ಎತ್ತುವೆ? ಅಣಕು ಮಾಡೋಣ.
3. ಗಾಜಿನ ವಸ್ತುಗಳನ್ನು ಎತ್ತಿಡುವಾಗ ಹೇಗೆ ಜಾಗ್ರತೆ ವಹಿಸುವೆ ? ತರಗತಿಯಲ್ಲಿ ಅಭ್ಯಾಸ ಮಾಡೋಣ.
4. ನಿನ್ನ ಸ್ನೇಹಿತರೆಲ್ಲಾ ಸೇರಿಕೊಂಡು ತರಗತಿಯಲ್ಲಿನ ಮೇಜು, ಕುರ್ಚಿ, ಬೆಂಚುಗಳನ್ನು ಹಾಗೂ ಇತರೆ ವಸ್ತುಗಳನ್ನು ಸರಿಯಾಗಿ ಜೋಡಿಸಿ.

# 7.4 ನನ್ನ ನಡಿಗೆ



**ಸೂಚನೆ:** ಚಿತ್ರಗಳನ್ನು ಗಮನಿಸಿ, ವಿವಿಧ ಭೂ ಪ್ರದೇಶದಲ್ಲಿ ಹೇಗೆ ನಡೆಯಬೇಕೆಂದು ತಿಳಿಯೋಣ.









NOT TO BE REPUBLISHED © KTBS

**ಉತ್ತರಿಸು:**
1. ಚಿತ್ರಗಳಲ್ಲಿ ಏನನ್ನು ಕಾಣುತ್ತಿದ್ದೇವೆ ? ನೋಡಿ ಹೇಳೋಣ.
2. ಎತ್ತರದ ಪ್ರದೇಶವನ್ನು ಹತ್ತುವಾಗ ಹಾಗೂ ತಗ್ಗು ಪ್ರದೇಶದಿಂದ ಇಳಿಯುವಾಗ ನಮಗೆ ಹೇಗನ್ನಿಸುತ್ತದೆ?
3. ಮಳೆಗಾಲದಲ್ಲಿ ಬೇಗ ಬೇಗ ನಡೆಯಲು ಸಾಧ್ಯವಾಗುವುದಿಲ್ಲ ಏಕೆ?
4. ಮಹಡಿಯ ಮೆಟ್ಟಿಲುಗಳನ್ನು ಹತ್ತುವಾಗ ಮತ್ತು ಇಳಿಯುವಾಗ ಎಚ್ಚರ ವಹಿಸಬೇಕು. ಏಕೆ?
5. ಮರಳಿನಲ್ಲಿ ವೇಗವಾಗಿ ಓಡಬಹುದೇ? ಯೋಚಿಸಿ ಉತ್ತರಿಸಿ.

7

## 7.5 ತಾಡಾಸನ

2

**ಸೂಚನೆ:** ತಾಡಾಸನ ಮಾಡುವುದು ಹೇಗೆಂದು ಕಲಿಯೋಣ.



© KTBS NOT TO BE REPUBLISHED

**ಹೀಗೆ ಮಾಡು:**

1. ತಾಡಾಸನ ಭಂಗಿಯಲ್ಲಿ ಅಲುಗಾಡದೇ ಒಂದು ನಿಮಿಷ ನಿಲ್ಲಲು ಅಭ್ಯಾಸ ಮಾಡಿಕೊಳ್ಳೋಣ.
2. ದಿನಕ್ಕೆ ಒಮ್ಮೆ ಸ್ನೇಹಿತರೆಲ್ಲಾ ಸೇರಿ ತಾಡಾಸನ ಭಂಗಿಯಲ್ಲಿ ಒಂದು ನಿಮಿಷ ನಿಂತುಕೊಳ್ಳೋಣ.
3. ಶಿಕ್ಷಕರು ಮತ್ತು ಹಿರಿಯರ ಸಹಾಯದಿಂದ ಸರಳ ಆಸನಗಳನ್ನು ಮಾಡುವುದು ಹೇಗೆಂದು ಕಲಿತುಕೊಳ್ಳೋಣ..

7

## 7.6 ವಾಕ್.... ವಾಕ್.... ವಾಕ್....

**ಸೂಚನೆ:** ಪ್ರತೀ ದಿನ ನಾವು ಎಷ್ಟು ದೂರ ನಡೆಯುತ್ತೇವೆ ಎಂಬುದರ ಬಗ್ಗೆ ಚರ್ಚಿಸೋಣ.










**ಪ್ರತೀ ದಿನ ಬೆಳಗ್ಗೆ ಮತ್ತು ಸಂಜೆ ದೊಡ್ಡವರು ವಾಕ್ ಮಾಡುತ್ತಾರೆ. ಏಕೆ ಎಂದು ಕೇಳಿ ತಿಳಿಯೋಣ.**

**ಉತ್ತರಿಸು:** 1. ನಿನ್ನ ಮನೆಯಿಂದ ಶಾಲೆಗೆ ನೀನು ಹೇಗೆ ಬರುತ್ತೀಯಾ?
2. ನೀನು ಪ್ರತೀ ದಿನ ಎಷ್ಟು ದೂರ ನಡೆಯುವೆ?
3. ಪುಟ್ಟ ಮಕ್ಕಳು ಒಬ್ಬರೇ ಸ್ವತಂತ್ರವಾಗಿ ನಡೆಯಲಾರರು. ಏಕೆ?
4. ನಾವು ಪ್ರತೀ ದಿನ ನಡೆಯುವುದರಿಂದ ಆಗುವ ಅನುಕೂಲ ಏನೆಂದು ಶಿಕ್ಷಕರೊಂದಿಗೆ ಚರ್ಚಿಸೋಣ.

@KTBS NOT TO BE REPUBLISHED

7

# 7.7 ನಾನು ಮತ್ತು ನನ್ನ ಕೆಲಸ

**ಸೂಚನೆ:** ಮನೆ ಮತ್ತು ಶಾಲೆಯಲ್ಲಿ ನಾವು ಮಾಡುವ ಕೆಲಸಗಳ ಬಗ್ಗೆ ಚರ್ಚಿಸೋಣ.













©KTBS NOT TO BE REPUBLISHED

**ಉತ್ತರಿಸು:**1. ನೀನು ಮನೆಯಲ್ಲಿ ಮಾಡುವ ಕೆಲಸಗಳು ಯಾವುವು?

2. ಮನೆ ಮತ್ತು ಶಾಲೆಯ ಕೈ–ತೋಟದಲ್ಲಿ ಯಾವ ಯಾವ ಕೆಲಸಗಳನ್ನು ಮಾಡುವೆ?
3. ನಿನಗೆ ಯಾವ ಕೆಲಸಗಳನ್ನು ಮಾಡಲು ಹೆಚ್ಚು ಇಷ್ಟವಾಗುತ್ತದೆ?
4. ಯಾವ ಯಾವ ಕೆಲಸಗಳಿಗೆ ಹಿರಿಯರ ನೆರವು ಬೇಕು ? ಯೋಚಿಸಿ ತಿಳಿಸು.

8

# 8.1 ತಿಳಿದು ಎಚ್ಚರ ವಹಿಸುವೆ

**ಸೂಚನೆ:** ಇಲ್ಲಿ ಅಪಾಯಕಾರಿ ಸನ್ನಿವೇಶಗಳ ಚಿತ್ರಗಳನ್ನು ನೀಡಲಾಗಿದೆ. ಈ ಕುರಿತು ಹೇಗೆ ನಾವು ಎಚ್ಚರ ವಹಿಸಬೇಕು ಎಂಬುದರ ಬಗ್ಗೆ ತಿಳಿಯೋಣ.









**ಉತ್ತರಿಸು:**
1. ಇಲ್ಲಿನ ಚಿತ್ರಗಳು ಯಾವುದರ ಬಗ್ಗೆ ನಮಗೆ ತಿಳಿಸುತ್ತಿವೆ?
2. ಈ ಸನ್ನಿವೇಶಗಳ ಬಗ್ಗೆ ಎಚ್ಚರ ವಹಿಸದಿದ್ದರೆ ಏನಾಗುತ್ತದೆ?
3. ಇವುಗಳಲ್ಲದೆ ನಮ್ಮ ಸುತ್ತಮುತ್ತಲೂ ಇರುವ ಇತರೆ ಅಪಾಯಕಾರಿ ಸನ್ನಿವೇಶಗಳ ಬಗ್ಗೆ ತಿಳಿಸುವೆಯಾ?

8

## 8.2 ಸರಿಪಡಿಸಿ ಹೇಳು

3

**ಸೂಚನೆ:** ಇಲ್ಲಿನ ಚಿತ್ರ ಸನ್ನಿವೇಶಗಳನ್ನು ಗಮನಿಸೋಣ. ನಾವು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೇಳೋಣ.







© KTBS NOT TO BE REPUBLISHED

**ಹೀಗೆ ಮಾಡು :** ಇಲ್ಲಿ ಕೊಟ್ಟಿರುವ ಒಂದೊಂದೇ ಚಿತ್ರಗಳ ತಪ್ಪುಗಳನ್ನು ಗುರುತಿಸೋಣ. ಈ ತಪ್ಪುಗಳನ್ನು ಸರಿಪಡಿಸುವುದು ಹೇಗೆಂದು ಈಗ ಚರ್ಚಿಸೋಣ.

8

## 8.3 ಇವು ನಮಗೆ ಬೇಕು

3

**ಸೂಚನೆ:** ಈ ಚಿತ್ರಗಳಲ್ಲಿರುವ ಸರ್ಕಾರಿ ವಾಹನಗಳು ನಮಗೆ ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ತಿಳಿಯೋಣ.




**ಉತ್ತರಿಸು:**
1. ಈ ಚಿತ್ರಗಳಲ್ಲಿರುವ ವಾಹನಗಳನ್ನು ನೀನು ಎಲ್ಲಿ ನೋಡಿರುವೆ?
2. ಈ ವಾಹನಗಳು ನಮಗೆ ಹೇಗೆ ಸಹಾಯ ಮಾಡುತ್ತವೆ? ತಿಳಿಸು.
3. ಈ ವಾಹನಗಳು ಇಲ್ಲದಿದ್ದಲ್ಲಿ ಏನಾಗುತ್ತಿತ್ತು? ವಿವರಿಸು.
4. ಇವುಗಳ ಸಹಾಯವಾಣಿ ಸಂಖ್ಯೆಗಳ ಮಾಹಿತಿ ನಿನಗೆ ತಿಳಿದಿದ್ದಲ್ಲಿ ತಿಳಿಸು. ಇಲ್ಲವಾದಲ್ಲಿ ತಿಳಿದುಕೋ.

8

# 8.4 ನನ್ನ ಎಚ್ಚರಿಕೆ ನನ್ನ ಕೈಯಲ್ಲಿ

2

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ. ಇವುಗಳನ್ನು ಬಳಸುವಾಗ, ನಾವು ವಹಿಸಬೇಕಾದ ಎಚ್ಚರಿಕೆ ಏನೆಂದು ತಿಳಿಯೋಣ.









@KTBS NOT TO BE REPUBLISHED

**ಹೀಗೆ ಮಾಡು:**
1. ಹಿರಿಯರ ಸಹಾಯವಿಲ್ಲದೆ ಮೇಲಿನ ಸನ್ನಿವೇಶಗಳ ಬಳಿಗೆ ಹೋಗದಿರು.
2. ಖುಷಿಗಾಗಿ, ಮೋಜಿಗಾಗಿ ಇಂತಹ ಸನ್ನಿವೇಶದ ಬಳಿ ಹೋಗುವುದು ಅಪಾಯ ಎಂದು ನಿನಗೆ ತಿಳಿದಿರಲಿ.
3. ಶಾಲೆಯ ಆವರಣದಲ್ಲಿ ಕೆಲವು ಅಪಾಯಕಾರಿ ಸನ್ನಿವೇಶಗಳಿರುತ್ತವೆ. ಎಂಬುದರ ಬಗ್ಗೆ ಗೊತ್ತಿರಲಿ.
4. ನಿಮ್ಮೂರಿನ ಅಪಾಯಕಾರಿ ಸನ್ನಿವೇಶಗಳ ಬಗ್ಗೆ ಹಿರಿಯರಿಂದ ಕೇಳಿ ತಿಳಿ.

## 8.5 ಇವರಂತೆ ನಾವಾಗೋಣ



**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಇವರ ವೃತ್ತಿಗಳು ಯಾವುದೆಂದು ತಿಳಿಯೋಣ.














@KTBS
NOT TO BE REPUBLISHED

**ಒಳ್ಳೇ ಉದ್ದೇಶವಿರುವ ಎಲ್ಲಾ ರೀತಿಯ ವೃತ್ತಿಗಳನ್ನು ನಾವು ಒಪ್ಪಿ ಗೌರವಿಸಬೇಕು.**

**ಉತ್ತರಿಸು:**
1. ಈ ಚಿತ್ರಗಳಲ್ಲಿ ಯಾವ ಯಾವ ವೃತ್ತಿಯವರನ್ನು ಕಾಣಬಹುದು ?
2. ನಿನ್ನ ಕುಟುಂಬದ ಸದಸ್ಯರು ಯಾವ ಯಾವ ವೃತ್ತಿಗಳನ್ನು ಮಾಡುತ್ತಾರೆ?
3. ನೀನು ಯಾವ ವೃತ್ತಿಯನ್ನು ಇಷ್ಟ ಪಡುತ್ತೀಯಾ? ಏಕೆ ?
4. ದೊಡ್ಡವರಾದ ಮೇಲೆ ಯಾವ ವೃತ್ತಿ ಮಾಡಬೇಕು ಎಂದು ನಿಮಗನ್ನಿಸುತ್ತದೆ ? ಚರ್ಚಿಸೋಣ.

8

## 8.6 ಯೋಚಿಸು – ಜೋಡಿಸು

3

**ಸೂಚನೆ:** ಎಡಭಾಗದ ಚಿತ್ರಗಳನ್ನು ಬಲಭಾಗದ ಸರಿ ಚಿತ್ರಗಳಿಗೆ ಗೆರೆ ಎಳೆದು ಹೊಂದಿಸು.


















@KTBS
NOT TO BE REPUBLISHED

**ಹೀಗೆ ಮಾಡು :** ಇವರಲ್ಲದೆ ಬೇರೆ ಬೇರೆ ವೃತ್ತಿಗಳಲ್ಲಿ ಕೆಲಸ ಮಾಡುವವರ ಬಗ್ಗೆ ತರಗತಿಯಲ್ಲಿ ಮಾತನಾಡೋಣ.

8

# 8.7 ನನ್ನ ಸಮೀಕ್ಷೆ



3

**ಸೂಚನೆ:** ನಿಮ್ಮ ಊರು/ ಗ್ರಾಮ / ವಾರ್ಡ್ / ಬಡಾವಣೆಯಲ್ಲಿ ಯಾವ ಯಾವ ವೃತ್ತಿಗಳನ್ನು ಮಾಡುವವರಿದ್ದಾರೆ ಎಂಬುದನ್ನು ಸಮೀಕ್ಷೆ ಮಾಡೋಣ.

**ಹೀಗೆ ಮಾಡು :** ಇಲ್ಲಿ ಕೊಟ್ಟಿರುವ ವೃತ್ತಿಗಳನ್ನು ಹಿರಿಯರು ಗಟ್ಟಿಯಾಗಿ ಓದಿ ಹೇಳಲಿ. ಅದನ್ನು ಅರ್ಥಮಾಡಿಕೊಂಡು ಸೂಚನೆಯಂತೆ ಚಿತ್ರ ಬಿಡಿಸು. ಈ ಮಾಹಿತಿಯನ್ನು ತರಗತಿಯಲ್ಲಿ ಹಂಚಿಕೊ.

**ಚಟುವಟಿಕೆ:** ಈ ಪಟ್ಟಿಯಲ್ಲಿ ಕೆಲವು ವೃತ್ತಿಗಳ ವಿವರವನ್ನು ನೀಡಿದೆ. ಅವುಗಳು ನಿಮ್ಮ ಸುತ್ತ–ಮುತ್ತಲು ಕಂಡುಬಂದಲ್ಲಿ  ಚಿತ್ರ ಬಿಡಿಸು. ಇಲ್ಲದಿದ್ದಲ್ಲಿ  ಚಿತ್ರ ಬಿಡಿಸು.

| ಕ್ರ.ಸಂ. | ವೃತ್ತಿಗಳು |  |  |
|---|---|---|---|
| 1 | ಹೂ, ಹಣ್ಣು, ತರಕಾರಿ ವ್ಯಾಪಾರಿಗಳು | | |
| 2 | ಬಟ್ಟೆ ಹೊಲೆಯುವವರು | | |
| 3 | ವೆಲ್ಡರ್ (ಕಬ್ಬಿಣದ ಸಾಮಗ್ರಿ ತಯಾರಿಸುವವರು) | | |
| 4 | ಕಾರ್ಪೆಂಟರ್ (ಮರದ ಸಾಮಗ್ರಿ ತಯಾರಿಸುವವರು) | | |
| 5 | ಮೊಬೈಲ್ ರಿಪೇರಿ ಮಾಡಿ ಕೊಡುವವರು | | |
| 6 | ಔಷಧಿ ಅಂಗಡಿ ವ್ಯಾಪಾರಿಗಳು | | |
| 7 | ಸೈಕಲ್ ರಿಪೇರಿ ಮಾಡಿಕೊಡುವವರು | | |
| 8 | ಲೇಖನ ಸಾಮಗ್ರಿ ಮಾರುವವರು (ಪುಸ್ತಕ, ಪೆನ್ನು, ಪೆನ್ಸಿಲ್ ಇತ್ಯಾದಿ) | | |
| 9 | ಬಿದಿರು ಬುಟ್ಟಿಗಳನ್ನು ಹೆಣೆಯುವವರು | | |
| 10 | ಚಪ್ಪಲಿ ರಿಪೇರಿ ಮಾಡಿಕೊಡುವವರು | | |
| 11 | ದಿನಸಿ ಸಾಮಗ್ರಿ ಮಾಡುವವರು | | |
| 12 | ಬಟ್ಟೆ / ಸೀರೆ ವ್ಯಾಪಾರ ಮಾಡುವವರು | | |

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

NOT TO BE REPUBLISHED ©KTBS

8

## 8.8 ಇವುಗಳನ್ನು ಯಾರು ಬಳಸುತ್ತಾರೆ?

3

**ಸೂಚನೆ:** ಈ ಚಿತ್ರಗಳಲ್ಲಿ ಕೆಲವು ವೃತ್ತಿಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ನೀಡಿದೆ. ಇವುಗಳನ್ನು ಯಾರು, ಎಲ್ಲಿ, ಯಾವಾಗ ಬಳಸುತ್ತಾರೆ ಎಂದು ಚರ್ಚಿಸೋಣ.









@KTBS NOT TO BE REPUBLISHED

**ಉತ್ತರಿಸು:** 1. ಈ ಸಾಮಗ್ರಿಗಳನ್ನು ಯಾರು ಎಲ್ಲೆಲ್ಲಿ ಬಳಸುತ್ತಾರೆ? ತಿಳಿಸೋಣ.

* ಇಲ್ಲಿನ ಪ್ರತಿಯೊಂದು ಸಾಮಗ್ರಿಗಳ ಉಪಯೋಗಗಳ ಬಗ್ಗೆ ತರಗತಿಯಲ್ಲಿ ಚರ್ಚಿಸೋಣ.

9

# 9.1 ನನ್ನ ಮುಖಭಾವ ಗುರುತಿಸು

2

**ಸೂಚನೆ:** ಮಕ್ಕಳೇ, ನನ್ನ ನಾಲ್ಕು ಚಿತ್ರಗಳನ್ನು ಗಮನಿಸಿ, ನನ್ನ ಮುಖದಲ್ಲಿ ಕಾಣುವ ಭಾವನೆಗಳನ್ನು ಗುರುತಿಸಿ ಹೇಳುವಿರಾ?









@KTBS NOT TO BE REPUBLISHED

**ಉತ್ತರಿಸು:**

1. ಈ ಮೇಲಿನ ಪ್ರತಿಯೊಂದು ಚಿತ್ರಗಳಲ್ಲಿ ಯಾವ ಯಾವ ರೀತಿಯ ಭಾವನೆಗಳನ್ನು ಕಾಣುವೆ?
2. ಈ ಭಾವನೆಗಳಂತೆ ನೀನು ಅಭಿನಯಿಸುವೆಯಾ? ಮಾಡಿ ತೋರಿಸೋಣ.
3. ಈ ರೀತಿಯ ಭಾವನೆಗಳು ನಿನಗೆ ಯಾವ ಸಂದರ್ಭದಲ್ಲಿ ಬರುತ್ತವೆ ಎಂಬುದನ್ನು ಯೋಚಿಸಿ ತಿಳಿಸೋಣ.

9

## 9.2 ಓದಿ ಉತ್ತರಿಸುವೆ

3

**ಸೂಚನೆ:** ಇಲ್ಲಿ ಕೆಲವು ಹೇಳಿಕೆಗಳನ್ನು ನೀಡಿದೆ. ಅವುಗಳನ್ನು ಓದಿ, ಖುಷಿಯಾಗುವ ಹೇಳಿಕೆಗಳಿಗೆ ☺ ಚಿತ್ರ ರಚಿಸು. ಖುಷಿಯಾಗದ ಹೇಳಿಕೆಗಳಿಗೆ ◯ ಚಿತ್ರ ರಚಿಸು.

| ಕ್ರ.ಸಂ. | ಹೇಳಿಕೆಗಳು | ☺ | ◯ |
|---|---|---|---|
| 1 | ಸಿಹಿಯಾದ ತಿನಿಸುಗಳನ್ನು ತಿನ್ನುವುದು | | |
| 2 | ಯಾವಾಗಲೂ ಬರೆಯುವುದು ಮತ್ತು ಓದುವುದು | | |
| 3 | ಮಣ್ಣಿನಿಂದ ವಿವಿಧ ಆಟಿಕೆಗಳನ್ನು ಮಾಡುವುದು | | |
| 4 | ಜಾತ್ರೆ ಅಥವಾ ಶಾಪಿಂಗ್ ಮಾಲ್‌ಗೆ ಹೋಗುವುದು | | |
| 5 | ಶಾಲೆಯ ಕೈ–ತೋಟದ ಗಿಡಗಳನ್ನು ಆರೈಕೆ ಮಾಡುವುದು | | |
| 6 | ಸಾಕು ಪ್ರಾಣಿಗಳೊಂದಿಗೆ ಆಟ ಆಡುವುದು | | |
| 7 | ಚಿತ್ರವನ್ನು ಬಿಡಿಸಿ ಬಣ್ಣವನ್ನು ತುಂಬುವುದು | | |
| 8 | ಬೆಳಗ್ಗೆ ಬೇಗನೆ ಎದ್ದು ವ್ಯಾಯಾಮ ಮಾಡುವುದು | | |
| 9 | ಹಾಡುಗಳನ್ನು ಹಾಡುವುದು | | |
| 10 | ಹಸಿ ತರಕಾರಿಗಳನ್ನು ತಿನ್ನುವುದು | | |

@KTBS
NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

9

# 9.3 ನನ್ನ ತುಂಟಾಟಗಳು

2

**ಸೂಚನೆ:** ಈ ಚಿತ್ರಗಳನ್ನು ಗಮನಿಸೋಣ. ಇವುಗಳ ಬಗ್ಗೆ ಮಾತನಾಡೋಣ.



NOT TO BE REPUBLISHED @KTBS

**ಉತ್ತರಿಸು:**

1. ಈ ಚಿತ್ರಗಳಲ್ಲಿ ಇರುವಂತೆ ಎಂದಾದರೂ ನೀನು ನಡೆದುಕೊಂಡಿರುವೆಯಾ? ಯೋಚಿಸಿ ತಿಳಿಸು.
2. ನೀನು ಮನೆಯಲ್ಲಿ ನಡೆದುಕೊಳ್ಳುವ ತುಂಟಾಟಗಳು ಯಾವುವು? ತಿಳಿಸು.
3. ನಿನ್ನ ಯಾವ ಯಾವ ತುಂಟಾಟಕ್ಕೆ ಹಿರಿಯರಿಗೆ ಕೋಪ ಬರುತ್ತದೆ ? ಯೋಚಿಸಿ ತಿಳಿಸು.

9

## 9.4 ಗೆಳೆಯರೊಂದಿಗೆ ನಾನು

2

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಇಲ್ಲಿ ಮಕ್ಕಳು ಹೇಗೆ ಕೆಲಸ ಮಾಡುತ್ತಿದ್ದಾರೆ ಎಂದು ಚರ್ಚಿಸೋಣ.







**ಉತ್ತರಿಸು:**

1. ಶಾಲೆಯಲ್ಲಿ ಯಾವ ಯಾವ ಕೆಲಸಗಳನ್ನು ನೀನು ಗುಂಪಿನಲ್ಲಿ ಮಾಡುವೆ?
2. ಮನೆಯಲ್ಲಿ ಯಾವ ಯಾವ ಕೆಲಸಗಳನ್ನು ಗುಂಪಿನಲ್ಲಿ ಮಾಡುವರು?
3. ನಿನ್ನ ಗೆಳೆಯರು ನಿನಗೆ ಹೇಗೆಲ್ಲಾ ಸಹಾಯ ಮಾಡುವರು?
4. ಶಾಲೆಯಲ್ಲಿ ಗುಂಪುಗಳಲ್ಲಿ ಮಾಡುವ ಯಾವುದಾದರೂ ಎರಡು ಕೆಲಸಗಳನ್ನು ಹೆಸರಿಸು.

10

## 10.1 ನನ್ನ ಮುದ್ದು ಪ್ರಾಣಿ–ಪಕ್ಷಿಗಳು

2

**ಸೂಚನೆ:** ಈ ಚಿತ್ರಗಳಲ್ಲಿನ ಪ್ರಾಣಿ–ಪಕ್ಷಿಗಳ ಬಗ್ಗೆ ಮಾತನಾಡೋಣ.













@KTBS
NOT TO BE REPUBLISHED

**ಉತ್ತರಿಸು:** 1. ನಿಮ್ಮ ಮನೆಯಲ್ಲಿ ಯಾವ ಯಾವ ಪ್ರಾಣಿ–ಪಕ್ಷಿಗಳನ್ನು ಸಾಕಿರುವಿರಿ?

2. ನಿನ್ನ ಇಷ್ಟದ ಪ್ರಾಣಿ–ಪಕ್ಷಿಗಳನ್ನು ಹೆಸರಿಸು. ಅವುಗಳನ್ನು ಹೇಗೆ ನೋಡಿಕೊಳ್ಳುವೆ ?

3. ಪ್ರಾಣಿ/ಪಕ್ಷಿಗಳಿಂದ ನಮಗಾಗುವ ಉಪಯೋಗಗಳೇನು? ವಿವರಿಸು.

# 10

## 10.2 ಬಣ್ಣದ ಮೋಜು

**ಸೂಚನೆ:** ಈ ಚಿತ್ರಕ್ಕೆ ಸೂಕ್ತವಾದ ಬಣ್ಣ ಹಾಕಿ ನಂತರ ಚಿತ್ರದ ಬಗ್ಗೆ ಮಾತನಾಡೋಣ.



@KTBS NOT TO BE REPUBLISHED

**ಉತ್ತರಿಸು:** 1. ಗಿಡ ಮರಗಳನ್ನು ನಾವು ಹೇಗೆ ನೋಡಿಕೊಳ್ಳಬೇಕು?

2. ಗಿಡ ಮರಗಳು ಇಲ್ಲದಿದ್ದರೆ ಏನಾಗುತ್ತಿತ್ತು? ಯೋಚಿಸು.

3. ಗಿಡ ಮರಗಳಿಂದ ನಮಗಾಗುವ ಉಪಯೋಗಗಳ ಬಗ್ಗೆ ಮಾತನಾಡೋಣ.

10

## 10.3 ಪ್ರಾಣಿ–ಪಕ್ಷಿಗಳ ಆರೈಕೆ

2

**ಸೂಚನೆ:** ಈ ಚಿತ್ರಗಳಲ್ಲಿ ಪ್ರಾಣಿ–ಪಕ್ಷಿಗಳನ್ನು ಹೇಗೆ ಆರೈಕೆ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸೋಣ.







**ಉತ್ತರಿಸು:**

1. ಪ್ರಾಣಿ–ಪಕ್ಷಿಗಳನ್ನು ಜೋಪಾನದಿಂದ ಆರೈಕೆ ಮಾಡಬೇಕು. ಏಕೆ?
2. ನಿಮ್ಮ ಮನೆಯಲ್ಲಿ ಸಾಕಿರುವ ಪ್ರಾಣಿ–ಪಕ್ಷಿಗಳಿಗೆ ಹೇಗೆಲ್ಲಾ ಆರೈಕೆ ಮಾಡುವಿರಿ?
3. ಪ್ರಾಣಿ ಪಕ್ಷಿಗಳು ನಿದ್ದೆ ಮಾಡುವುದನ್ನು, ಸ್ನಾನ ಮಾಡುವುದನ್ನು ನೀನು ನೋಡಿರುವೆಯಾ? ವಿವರಿಸು.

10

## 10.4 ಹೊಂದಿಸು

ಮುಂದುವರಿದಿದೆ...

3

**ಸೂಚನೆ:** ಎಡಭಾಗದ ಚಿತ್ರಗಳನ್ನು ಬಲಭಾಗದ ಸರಿಹೊಂದುವ ಚಿತ್ರಗಳಿಗೆ ಗೆರೆ ಎಳೆದು ಹೊಂದಿಸು.

















@KTBS
NOT TO BE REPUBLISHED









@KTBS
TO BE REPUBLISHED





**ಹೀಗೆ ಮಾಡು:**

**ಚಿತ್ರಗಳನ್ನು ಹೊಂದಿಸಿದ ನಂತರ ಇವುಗಳ ಸಂಬಂಧ ಕುರಿತು ಚರ್ಚಿಸೋಣ.**

| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

10

## 10.5 ಚಿತ್ರಕ್ಕೆ ನನ್ನ ಬಣ್ಣ

2

**ಸೂಚನೆ:** ಈ ಚಿತ್ರಕ್ಕೆ ಇಷ್ಟವಾದ ಬಣ್ಣವನ್ನು ತುಂಬೋಣ ಮತ್ತು ಮಾತನಾಡೋಣ.


@KTBS
NOT TO BE REPUBLISHED

**ಉತ್ತರಿಸು:**
1. ಪ್ರಾಣಿ–ಪಕ್ಷಿಗಳಿಗೆ ನೋವಾಗುವ ಸಂದರ್ಭಗಳು ಯಾವುವು?
2. ಗಾಯವಾದ ಪ್ರಾಣಿ–ಪಕ್ಷಿಗಳನ್ನು ನಾವು ಹೇಗೆ ನೋಡಿಕೊಳ್ಳಬೇಕು?
3. ನಿಮ್ಮ ಮನೆಯಲ್ಲಿ ಸಾಕಿರುವ ಪ್ರಾಣಿ–ಪಕ್ಷಿಗಳಿಗೆ ಗಾಯವಾದಾಗ ಅಥವಾ ನೋವಾದಾಗ ಹೇಗೆ ಅವುಗಳಿಗೆ ಆರೈಕೆ ಮಾಡುತ್ತಾರೆ?

- ✦ ನನಗೆ ಅರ್ಥವಾಗಿದೆ ☐
- ✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

10

# 10.6 ಗಿಡ ಬೆಳೆಸಿ ಪರಿಸರ ಉಳಿಸಿ

2

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಇವುಗಳ ಬಗ್ಗೆ ಮಾತನಾಡೋಣ.









**ಉತ್ತರಿಸು:**
1. ನಾವೇಕೆ ಗಿಡಗಳನ್ನು ನೆಡಬೇಕು?
2. ಮರ ಗಿಡಗಳು ಇಲ್ಲದಿದ್ದರೆ ಸುತ್ತ–ಮುತ್ತಲ ಪರಿಸರ ಹೇಗಿರುತ್ತದೆ?
3. ನೀನು ಇದುವರೆಗೂ ಎಷ್ಟು ಗಿಡಗಳನ್ನು ನೆಟ್ಟಿರುವೆ?
4. ಗಿಡಗಳು ಬೆಳೆಯಲು ಏನೇನು ಬೇಕು ಎಂಬುದರ ಬಗ್ಗೆ ತರಗತಿಯಲ್ಲಿ ಮಾತನಾಡೋಣ.

10

## 10.7 ಯೋಜನೆ

ಮುಂದುವರಿದಿದೆ...

3

**ಚಟುವಟಿಕೆ–1**

ನಿನ್ನ ಇಷ್ಟದ ಪ್ರಾಣಿ ಅಥವಾ ಪಕ್ಷಿಯ ಚಿತ್ರ ಬರೆದು ಬಣ್ಣ ಹಾಕು.

@KTBS
NOT TO BE REPUBLISHED

**ಹೀಗೆ ಮಾಡು:**

ನೀನು ಬರೆದಿರುವ ಪ್ರಾಣಿ ಅಥವಾ ಪಕ್ಷಿ ಏಕೆ ಇಷ್ಟ ಎಂದು ಸ್ನೇಹಿತರ ಮುಂದೆ ಮಾತನಾಡು.

**ಚಟುವಟಿಕೆ–2**

ಈ ಡ್ರಾಯಿಂಗ್ ಹಾಳೆಯ ಮೇಲೆ ಯವುದಾದರೂಂದು ಸಸ್ಯದ ಚಿತ್ರವನ್ನು ಬರೆದು ಬಣ್ಣ ಹಾಕು.

@KTBS
NOT TO BE REPUBLISHED

**ಹೀಗೆ ಮಾಡು:**

ನೀನು ಬರೆದ ಸಸ್ಯದ ಬಗ್ಗೆ ಸ್ನೇಹಿತರ ಮುಂದೆ ಮಾತನಾಡು.

## ಚಟುವಟಿಕೆ–3

**ಸುಳಿವು ಗಮನಿಸಿ, ಪ್ರಾಣಿಗಳ ಆಹಾರವನ್ನು ಖಾಲಿ ಜಾಗದಲ್ಲಿ ಬರೆ.**





ಕಾಳುಗಳು

ಹಾಲು

ಹುಲ್ಲು

ಹಣ್ಣುಗಳು





**ಸೂಚನೆ:** ಒಂದು ಮರದಲ್ಲಿ ವಾಸಿಸಬಹುದಾದ ಪಕ್ಷಿ ಅಥವಾ ಪ್ರಾಣಿಗಳ ಬಗ್ಗೆ ಯೋಚಿಸಿ, ಖಾಲಿ ಜಾಗದಲ್ಲಿ ಆ ಹೆಸರುಗಳನ್ನು ಬರೆ.



©KTBS NOT TO BE REPUBLISHED

10

# 10.8 ನಾನೆಷ್ಟು ಕಲಿತಿದ್ದೇನೆ...? (ಸ್ವ ಮಾಲ್ಯಮಾಪನ)

3

**ಸೂಚನೆ:** ಇದುವರೆಗೂ ನಾನೆಷ್ಟು ಕಲಿತಿದ್ದೇನೆ ಎಂಬುದಕ್ಕೆ  ಚಿತ್ರದ ಕಾಲಂನಲ್ಲಿ ಮತ್ತು ಇನ್ನೂ ಕಲಿಯಬೇಕಿದ್ದಲ್ಲಿ  ಚಿತ್ರದ ಕಾಲಂನಲ್ಲಿ (✓) ಗುರುತು ಹಾಕೋಣ.

| ಕ್ರ.ಸಂ. | ಹೇಳಿಕೆಗಳು |  |  |
|---|---|---|---|
| 1 | ಚಾಕುವನ್ನು ಹೇಗೆ ಬಳಸಬೇಕು ಎಂದು ಕಲಿತಿರುವೆ. | | |
| 2 | ಹಳಗುಣಿ ಮಣೆ ಆಟದ ನಿಯಮಗಳ ಬಗ್ಗೆ ತಿಳಿದಿರುವೆ. | | |
| 3 | ಗುಂಪಿನಲ್ಲಿ ಮಾಡುವ ಕೆಲಸಗಳ ಬಗ್ಗೆ ತಿಳಿದಿರುವೆ. | | |
| 4 | ವಿವಿಧ ರೀತಿಯ ಚೆಂಡಾಟಗಳನ್ನು ಆಡುವೆ. | | |
| 5 | ಸುತ್ತಮುತ್ತ ಸನ್ನಿವೇಶಗಳನ್ನು ಗುರುತಿಸುವೆ. | | |
| 6 | ಸಹಾಯವಾಣಿ ಸಂಖ್ಯೆಗಳ ಮಾಹಿತಿ ಪಡೆದಿರುವೆ. | | |
| 7 | ಗಿಡ ಬೆಳೆಸುವುದನ್ನು ಅಭ್ಯಾಸ ಮಾಡಿಕೊಂಡಿರುವೆ. | | |
| 8 | ಪ್ರಾಣಿ ಪಕ್ಷಿಗಳ ಆರೈಕೆ ಬಗ್ಗೆ ತಿಳಿದಿರುವೆ. | | |
| 9 | ತಾಡಾಸನ ಮಾಡುವುದನ್ನು ಕಲಿತಿರುವೆ. | | |
| 10 | ನೈಲ್ ಕಟರ್‌ನಿಂದ ಉಗುರು ಕತ್ತರಿಸುವುದನ್ನು ಕಲಿತಿರುವೆ. | | |

@KTBS NOT TO BE REPUBLISHED

# ಮೌಲ್ಯಾಂಕನ – ಸೂಚಿತ ಕಲಿಕಾ ಫಲಗಳು

| ಮೈಲಿಗಲ್ಲು/ ಶೀರ್ಷಿಕೆ | ಕಲಿಕಾ ಫಲಗಳು | ತಿಂಗಳು | ಮೌ.ವಿಧ | |
|---|---|---|---|---|
| 5. ಆಟಗಳ ಗಮ್ಮತ್ತು | • ಆಟದ ಸನ್ನಿವೇಶಗಳಲ್ಲಿ ಚೆಂಡನ್ನು ಹಿಡಿಯುವರು ಎಸೆಯುವರು ಮತ್ತು ಒದೆಯುವರು.<br>• ಆಟದ ಸಮಯದಲ್ಲಿ ಇತರರ ಆಲೋಚನೆಗಳನ್ನು ಸೇರಿಸಲು ಇಚ್ಛೆಯನ್ನು ಪ್ರದರ್ಶಿಸುವರು.<br>• ಇತರರೊಂದಿಗೆ ಆಟ ಆಡುವಾಗ ನಿಯಮಗಳನ್ನುಪಾಲಿಸುವರು.<br>• ನೈಜ ಪ್ರಪಂಚದಲ್ಲಿನ ಸನ್ನಿವೇಶಗಳನ್ನು ಸರಳ ಗಣಿತದ ಸಮಸ್ಯೆಗಳೆಂದು ಗುರುತಿಸುವರು.<br>• ವಿವಿಧ ತಂತ್ರಗಳನ್ನು ಬಳಸಿಕೊಂಡು ಸರಳ ಸಂಖ್ಯಾತ್ಮಕ ಸಮಸ್ಯೆಗಳನ್ನು ಪರಿಹರಿಸುವರು. | ನವೆಂಬರ್–ಡಿಸೆಂಬರ್ | ರು.ಮೌ – 3 | ಸಂ.ಮೌ. – 2 * |
| 6. ಸುರಕ್ಷತೆಯ ವಿಧಾನ | • ಮೇಲ್ವಿಚಾರಣೆಯಲ್ಲಿ ಸಣ್ಣ ಚಾಕು,ಉಗುರು ಕತ್ತರಿಸುವ ಸಾಧನಗಳನ್ನು ಜಾಗರೂಕತೆಯಿಂದ ಬಳಸುವರು.<br>• ರಸ್ತೆಯಲ್ಲಿ ನಡೆಯುವಾಗ, ರಸ್ತೆಯಲ್ಲಿ ಸೈಕಲ್ ಸವಾರಿ ಮಾಡುವಾಗ ಮತ್ತು ಸಾರ್ವಜನಿಕ ಸಾರಿಗೆ ಇತ್ಯಾದಿಗಳಲ್ಲಿ ಪ್ರಾಥಮಿಕ ಸುರಕ್ಷತಾ ನಿಯಮಗಳನ್ನು ಅನುಸರಿಸುವರು. | | | |
| 7. ನಾನು ಮತ್ತು ನನ್ನ ಕೆಲಸ | • ಜಿಗಿಯುವರು ಮತ್ತು ಆಟವನ್ನು ಪೂರ್ಣಗೊಳಿಸುವರು.<br>• ಸೂಕ್ತ ತಂತ್ರ ಮತ್ತು ಸಮತೋಲನದೊಂದಿಗೆ ಭಾರವಾದ ವಸ್ತುಗಳನ್ನು ಸಾಗಿಸುವರು.<br>• ವೇಗದೊಂದಿಗೆ ಉತ್ತಮ ದೈಹಿಕ ಸಮತೋಲನವನ್ನು ಪ್ರದರ್ಶಿಸುವರು.<br>• ವಿಭಿನ್ನ ಭೂಪ್ರದೇಶಗಳಲ್ಲಿ ಒಂದು ಕಿಲೋಮೀಟರ್ ಅಥವಾ ಅದಕ್ಕಿಂತ ಹೆಚ್ಚು ದೂರ ಸರಾಗವಾಗಿ ನಡೆದುಕೊಂಡು ಹೋಗುವರು.<br>• ತಾಡಾಸನ ಭಂಗಿಯಲ್ಲಿ ಒಂದು ನಿಮಿಷದವರೆಗೆ ಸ್ಥಿರವಾಗಿ ನಿಲ್ಲುವರು.<br>• ಸರಾಗವಾಗಿ ಹತ್ತುವರು ಮತ್ತು ಜಿಗಿಯವರು.<br>• ಕೆಲಸ ಹಾಗೂ ಆಟದ ಸನ್ನಿವೇಶಗಳಲ್ಲಿ ಸಾಮರ್ಥ್ಯ ಮತ್ತು ಸಹಿಷ್ಣುತೆಯನ್ನು ಪ್ರದರ್ಶಿಸುವರು. | ಜನವರಿ–ಫೆಬ್ರವರಿ | ರು.ಮೌ–4 | |
| 8. ಸುತ್ತಲ ಆಚಾರ ಮತ್ತು ವೃತ್ತಿಗಳು | • ವಯಸ್ಕರು ಮತ್ತು ಸಹಪಾಠಿಗಳ ಸಹಾಯವನ್ನು ಕೇಳಲು ಭಾಷೆಯನ್ನು ಬಳಸುವರು.<br>• ಪ್ರಾಥಮಿಕ ಸುರಕ್ಷತೆಯ ಕ್ರಮಗಳನ್ನು ಅರ್ಥ ಮಾಡಿಕೊಳ್ಳುವವರು ಮತ್ತು ಅನುಸರಿಸುವರು.<br>• ಸಮಾಜಕ್ಕೆ ಕೊಡುಗೆ ನೀಡುವ ದೃಷ್ಟಿಯಿಂದ ತಮ್ಮ ಸಾಮರ್ಥ್ಯ ಮತ್ತು ಆಸಕ್ತಿಯನ್ನು ವ್ಯಕ್ತಪಡಿಸಲು ಆರಂಭಿಸುತ್ತಾರೆ ನಾನು ದೊಡ್ಡವನಾದ ಮೇಲೆ ನಾನು ರೈತ ವೈದ್ಯ ಪೈಲೆಟ್ ಸೈನಿಕನಾಗಲು ಬಯಸುತ್ತೇನೆ.<br>• ಕುಟುಂಬದ ಸದಸ್ಯರ ವೃತ್ತಿ ಕೆಲಸ ಮಾಡುವ ಸ್ಥಳದ ಬಗೆಗಿನ ವಿವರಗಳನ್ನು ಹಂಚಿಕೊಳ್ಳುವರು.<br>• ಕುಟುಂಬದ ಹಿರಿಯರ ಸದಸ್ಯರ ಕೆಲಸವನ್ನು ಗೌರವಿಸುವರು. | | | |
| 9. ಮುಖ ಭಾವಗಳು | • ಸಮಾಜದ ಒಪ್ಪಿದ ರೀತಿಯಲ್ಲಿ ಭಾವನೆಗಳನ್ನು ವಿವರಿಸಿವರು.<br>• ಸೂಕ್ತವಾದ ಭಾವನೆಯೊಂದಿಗೆ ಪ್ರತಿಕ್ರಿಯಿಸುವರು.<br>• ತಮ್ಮನ್ನು ತಾವು ಶಾಂತ ಗೊಳಿಸಲು ತಂತ್ರಗಳನ್ನು ಪ್ರಜ್ಞಾಪೂರ್ವಕವಾಗಿ ಬಳಸುತ್ತಾರೆ.<br>• ತರಗತಿಯ ಚಟುವಟಿಕೆಗಳಿಗಾಗಿ ವಿಭಿನ್ನ ಗುಂಪುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವರು.<br>• ಇತರ ಮಕ್ಕಳನ್ನು ಅವರಲ್ಲಿರುವ ಭಿನ್ನತೆಗಳಿಂದ ಬದಲಿಸುವುದನ್ನು ಅಪಹಾಸ್ಯ ಮಾಡದಿರುವುದು. | ಮಾರ್ಚ್ | | |
| 10. ಪ್ರಾಣಿ–ಪಕ್ಷಿ –ಸಸ್ಯಗಳು | • ಇತರೆ ಜೀವಿಗಳ ಜೊತೆ ವ್ಯವಹರಿಸುವಾಗ ಆರೈಕೆ ಮತ್ತು ಮೃದುತ್ವ ತೋರುವರು. | | | |

*(ನವೆಂಬರ್‌ನಿಂದ ಮಾರ್ಚ್‌ತನಕ ಇರುವ ಎಲ್ಲಾ ಕಲಿಕಾ ಫಲಗಳನ್ನು ಪರಿಗಣಿಸುವುದು)

© KTBS NOT TO BE REPUBLISHED